**ಡಿಡಬ್ಲ್ಯೂ.1: ಪಿ. ಶೇಷಾದ್ರಿ.,**

**ಲಘು ವ್ಯವಹಾರಗಳ ಹಾಗೂ ಎಸಿಜೆಎಂ ನ್ಯಾಯಾಲಯ**
**ಬೆಂಗಳೂರು**
**ಸಿಸಿ ನಂಬರ್‌ಃ10205/2023**

| | |
|---|---|
| ಸಾಕ್ಷಿದಾರರ ಹೆಸರು | ಪಿ. ಶೇಷಾದ್ರಿ |
| ತಂದೆಯ ಹೆಸರು | ತಮ್ಮಯ್ಯ |
| ವಯಸ್ಸು | 64 ವರ್ಷ |
| ಉದ್ಯೋಗ | ಬಿಸಿನೆಸ್ |
| ವಾಸಸ್ಥಳ | ಪ್ರಶಾಂತನಗರ, ಬೆಂಗಳೂರು. |

**ದಿನಾಂಕಃ26.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಖ್ಯ ವಿಚಾರಣೆಃ ಆರೋಪಿ ಪರ ವಕೀಲರಿಂದಃ**

ನಾನು ಮತ್ತು ಪಿರ್ಯಾದುದಾರರು ಸುಮಾರು 30 ವರ್ಷಗಳಿಂದ ಪರಿಚಯ. ನಾನು ಈ ಮೊದಲು ಲಾರಿ ಮುಖಾಂತರ ಸರಕು ಸಾಗಣೆ ಮಾಡುವ ವ್ಯವಹಾರ ಮಾಡುತ್ತಿದ್ದೆನು. ನಾನು ಸರಕು ಸಾಗಣೆ ಮಾಡಿದಾಗ ಹಣ ನೀಡುವ ಬದಲು ನನಗೆ ಹಣದ ರಶೀದಿಯನ್ನು ನೀಡುತ್ತಿದ್ದರು. ನನಗೆ ತಕ್ಷಣ ಹಣ ಬೇಕಾದಾಗ ಪಿರ್ಯಾದುದಾರರು ನನ್ನ ಬಳಿ ಇದ್ದಂತಹ ಹಣದ ರಶೀದಿಗಳನ್ನು ಪಡೆದು ಅವರು ಕಮಿಷನ್ ಹಿಡಿದುಕೊಂಡು ಉಳಿಕೆ ಹಣವನ್ನು ನೀಡುತ್ತಿದ್ದರು. ಪಿರ್ಯಾದುದಾರರು ಈ ರೀತಿ ವ್ಯವಹಾರ ಮಾಡುತ್ತಿದ್ದರು. ಇದೇ ರೀತಿ ನನ್ನ ಹಾಗೂ ಪಿರ್ಯಾದುದಾರರ ನಡುವೆ ವ್ಯವಹಾರ ನಡೆಯುತ್ತಿತ್ತು. ನಂತರ ಲಾರಿಗಳನ್ನು ಖರೀದಿ ಹಾಗೂ ಮಾರಾಟ ಮಾಡುವ ಕೆಲಸ ಮಾಡುತ್ತಿದ್ದೆನು. ಆ ವೇಳೆಯಲ್ಲಿ ಪಿರ್ಯಾದುದಾರರು ನಾನು ಲಾರಿ ಖರೀದಿ ಮಾಡುವಾಗ ನನಗೆ ಹಣ ನೀಡುತ್ತಿದ್ದರು ನಾನು ಅದರಿಂದ ಬಂದಂತಹ ಲಾಭಾಂಶದಲ್ಲಿ ಶೇಕಡ 20 ರಷ್ಟು ಹಣವನ್ನು ಪಿರ್ಯಾದುದಾರರಿಗೆ ನೀಡುತ್ತಿದ್ದೆನು. ಪಿರ್ಯಾದುದಾರರು ಲಾರಿ

ಡಿಡಬ್ಲೂ.1: ಪಿ. ಶೇಷಾದ್ರಿ.,

ಖರೀದಿಗಾಗಿ ಹೂಡಿಕೆ ಮಾಡುತ್ತಿದ್ದಂತಹ ಹಣದ ಭದ್ರತೆಗಾಗಿ ನಾನು ಸಹಿ ಮಾಡಿ, ಭರ್ತಿ ಮಾಡಿದ ಚೆಕ್ಕುಗಳನ್ನು ನೀಡುತ್ತಿದ್ದೆನು. ಈ ರೀತಿ ವ್ಯವಹಾರ ನಡೆಯುತ್ತಿತ್ತು.

2020 ನೇ ಇಸವಿಯಲ್ಲಿ ನಾನು Linkfield India Pvt Ltd ಎಂಬ ಹೆಸರಿನಲ್ಲಿ Security services and office management ಏಜೆನ್ಸಿಯನ್ನು ಪ್ರಾರಂಭಿಸಲು ನಾನು ಪಿರ್ಯಾದುದಾರರ ಬಳಿ ಪ್ರಸ್ತಾಪಿಸಿದೆನು. ಆಗ ಪಿರ್ಯಾದುದಾರರು ಅದಕ್ಕೆ ನಾನು ಬಂಡವಾಳ ಹೂಡಿಕೆ ಮಾಡುತ್ತೇನೆ ಎಂದು ಒಪ್ಪಿಕೊಂಡು ದಿ.24.02.2020 ರಂದು ಪಿರ್ಯಾದುದಾರರು 15 ಲಕ್ಷ ರೂ.ಗಳ ಚೆಕ್ಕು ನೀಡಿದ್ದರು, ಆ ವೇಳೆಯನ್ನು ನಾನು ಭದ್ರತೆಗಾಗಿ 10 ಚೆಕ್ಕುಗಳನ್ನು ತಲಾ ರೂ.1,50,000/- ಗಳಿಗೆ ಪಿರ್ಯಾದುದಾರರಿಗೆ ನೀಡಿದ್ದೆನು. ದಿ.25.02.2020 ರಂದು ಬೆಳಿಗ್ಗೆ 11 ಗಂಟೆ ಸಮಯದಲ್ಲಿ ಪಿರ್ಯಾದುದಾರರು ನನಗೆ ಫೋನ್ ಮಾಡಿ ಈಗ ಎಲ್ಲಾ ಕಡೆ ಕೊರೊನಾ ವ್ಯಾಪಿಸುತ್ತಿರುವ ಕಾರಣ ನೀವು ನಿಮ್ಮ ಬಿಸಿನೆಸ್ ಅನ್ನು ಮುಂದುವರೆಸಬೇಡಿ ನಾನು ನೀಡಿದಂತಹ 15 ಲಕ್ಷ ರೂ. ಗಳನ್ನು ನಗದು ಮೂಲಕ ಹಿಂದಿರುಗಿಸಿ ಎಂದು ನನಗೆ ತಿಳಿಸಿದರು. ಆ ಕಾರಣ ನಾನು ದಿ.26.02.2020 ರಂದು 10 ಲಕ್ಷ ರೂ.ಗಳನ್ನು ಬ್ಯಾಂಕಿನಿಂದ ಡ್ರಾ ಮಾಡಿ ಪಿರ್ಯಾದುದಾರರ ಕಚೇರಿಗೆ ಹೋಗಿ ಅವರಿಗೆ 10 ಲಕ್ಷ ರೂ.ಗಳನ್ನು ನಗದಾಗಿ ನೀಡಿದೆನು. ದಿ.27.02.2020 ರಂದು ರೂ.1,10,000/- ಗಳಿಗೆ ಪಿರ್ಯಾದುದಾರರಿಗೆ ಒಂದು ಚೆಕ್ಕನ್ನು ನೀಡಿದೆನು, ಅದನ್ನು ಪಿರ್ಯಾದುದಾರರು ನಗದೀಕರಿಸಿಕೊಂಡಿರುತ್ತಾರೆ. ದಿ.09.03.2020 ರಂದು ನಾನು ಪುನಃ ಮೂರು ಲಕ್ಷ ರೂ. ಗಳನ್ನು ಬ್ಯಾಂಕಿನಿಂದ ಡ್ರಾ ಮಾಡಿ ಪಿರ್ಯಾದುದಾರರಿಗೆ ನಗದಾಗಿ ನೀಡಿದೆನು. ಉಳಿಕೆ 90 ಸಾವಿರ ರೂ.ಗಳನ್ನು ಯುಪಿಐ ಪೇಮೆಂಟ್ ಮುಖಾಂತರ ಪಿರ್ಯಾದುದಾರರಿಗೆ ಮರುಪಾವತಿಸಿದೆನು. ನಾನು ಹಣ ಮರುಪಾವತಿಸಿದ ನಂತರ ಪಿರ್ಯಾದುದಾರರು ನನಗೆ ನನ್ನ

**ಡಿಡಬ್ಲ್ಯೂ.1: ಪಿ. ಶೇಷಾದ್ರಿ.,**

ಚೆಕ್ಕುಗಳನ್ನು ಹಿಂದಿರುಗಿಸಿರುವುದಿಲ್ಲ. ನಾನು ಚೆಕ್ಕುಗಳನ್ನು ಹಿಂದಿರುಗಿಸಿ ಎಂದು ಕೇಳಿಕೊಂಡಾಗ ಈಗ ಕೊರೋನಾ ಇರುವ ಕಾರಣ ಕಚೇರಿಗೆ ಹೋಗಲು ಸಾಧ್ಯವಾಗುವುದಿಲ್ಲ, ಆ ನಂತರ ಹಿಂದಿರುಗಿಸುತ್ತೇನೆ ಎಂದು ಹೇಳಿದರು. ಆ ಎಲ್ಲಾ ಚೆಕ್ಕುಗಳನ್ನು ಬೌನ್ಸ್ ಮಾಡಿ 2023 ನೇ ಇಸವಿಯಲ್ಲಿ ಪಿರ್ಯಾದುದಾರರು ನನ್ನ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ. ಆದ್ದರಿಂದ ನನ್ನನ್ನು ಈ ಪ್ರಕರಣದಿಂದ ಬಿಡುಗಡೆ ಮಾಡಬೇಕೆಂದು ತಮಲ್ಲಿ ಕೋರಿಕೊಳ್ಳುತ್ತೇನೆ.

**ದಾಖಲಾತಿಗಳ ಹಾಜರಾತಿಗಾಗಿ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದ್ದೆ)**

**(ಓ. ಹೇ. ಕೇ. ಸ. ಇ.)**

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು.